ದಿಃ **05-12-2022** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್.ಕೆಪಿ. ವಕೀಲರಿಂದಃ**

ಸರ್ವೇ ನಂ. 254 ಇದು 112 ಎಕರೆ ವಿಸ್ತೀರ್ಣ ಹೊಂದಿತ್ತು. ಅದರಲ್ಲಿ ಎಷು ಹಿಸ್ಸೆಗಳು ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆಡಳಿತ ತರಬೇತಿ ಸಂಸ್ಥೆ ಮೈಸೂರು ಇವರ ಕಛೇರಿ ಸರ್ವೇ ನಂ. 254 ರಲ್ಲಿ ಇರುವುದಿಲ್ಲ. ಸಾಕ್ಷಿ ನಿಡಿ-2 ದಾಖಲೆಯನ್ನು ನೋಡಿ ಸದರಿ ಕಛೇರಿ ಸರ್ವೇ ನಂ 254/1 ರಲಿ ಇರುವುದಾಗಿ ನುಡಿಯುತ್ತಾರೆ. ನಮ್ಮ ಮನೆ ಏಗನೂರು ಗ್ರಾಮ ವ್ಯಾಪ್ತಿಯಲ್ಲಿ ಬರುತ್ತದೆ. ಯರಮರಸ್ ದಂಡ್ ಪ್ರದೇಶ ಸರ್ವೇ ನಂ 254 ರಲ್ಲಿ ಬರುತ್ತದೆ. ಆಡಳಿತ ತರಬೇತಿ ಸಂಸ್ಥೆ ಮೈಸೂರು ಇವರ ಕಛೇರಿ ಮತ್ತು ಯರಮರಸ್ ದಂಡ್ ಪ್ರದೇಶ ಅದರ ಮದ್ಯ ಸುಮಾರು 1 ಕಿ. ಮಿ. ಅಂತರ ಇದೆ. ಯರಮರಸ್ ದಂಡ್ ಪ್ರದೇಶದಲ್ಲಿ ಸುಮಾರು 150 ಮನೆಗಳು ಇವೆ. ವಾದಿಯ ಮನೆ ಯರಮರಸ್ ದಂಡ್ ಪ್ರದೇಶದಲ್ಲಿ ಬರುತ್ತದೆ ಎಂದರೆ ನಿಜ. ನಿಡಿ-1 ರಿಂದ 6 ದಾಖಲೆಗಳಲ್ಲಿ ಯರಮರಸ್ ದಂಡ್ ಪ್ರದೇಶ ಎಂದು ನಮೂದು ಕಂಡು ಬರುವುದಿಲ್ಲ ಎಂದರೆ ನಿಜ.

ಎಸ್.ಟಿಬಿಟಿ ಕಾಲೇಜ್ ಸರಕಾರಿ ಜಾಗೆಯಲ್ಲಿ ಇದೆ ಎಂದರೆ ನಿಜ. ಇಂಜಿನೀಯರಿಂಗ್ ಕಾಲೇಜು ಕೂಡ ಸರಕಾರಿ ಜಾಗೆಯಲ್ಲಿ ಇದೆ ಎಂದರೆ ನಿಜ. ಮೊಹಿನಿ ಇನಫ್ರಾಕ್ಟರ್ ಮಿಲ್ ಗೂ ಹಾಗೂ ಯರಮರಸ್ ದಂಡ್ ಪ್ರದೇಶಗೂ ಸುಮಾರು 50 ಮೀಟಾರ್ ಅಂತರ ಇದೆ. ಮೊಹಿನಿ ಇನಫ್ರಾಕ್ಟರ್ ಮಿಲ್ ಸರಕಾರಿ ಸ್ವಮ್ಯದ ಮಿಲ್ ಎಂದರೆ ನನಗೆ ಗೊತ್ತಿಲ್ಲ. ಅದು ಸರಕಾರಿ ಜಾಗೆಯಲ್ಲಿ ಇದೆ ಎಂದರೆ ನಿಜ. ವಾದಿ ಕಂಪೌಂಡ ಗೋಡೆ ಕಟ್ಟಿಕೊಳ್ಳಲು ನಗರಸಭೆಯಿಂದ ಪರಿವಾನಿಗೆ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ವಾದಿಯರು ಕಂಪೌಂಡ್ ಗೋಡೆ ಕಟ್ಟಿಕೊಳ್ಳಲು ದಿಃ 8.7.2014 ರಂದು ಪರವಾನಿಗೆ ಪಡೆದುಕೊಂಡಿದ್ದರು ಸಾಕ್ಷಿ ಸದರಿ ಕಟ್ಟಡ ಪರವಾನಿಗೆ ಅವದಿ ಮುಗಿದ ನಂತರ ಕಂಪೌಂಡ್ ಗೊಡೆ ಕಟ್ಟಿರುವುದಾಗಿ ನುಡಿಯುತ್ತಾರೆ. ಕಂಪೌಂಡ್ ಗೊಡೆ ಕಟ್ಟಡ ಕೆಲಸ ಮುಗಿದಿದೆ ಎಂದರೆ ಸಾಕ್ಷಿ ದಾರಿ ಬಿಟ್ಟು ಕಟ್ಟಡ ಕೆಲಸ ಮುಗಿದಿದೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ ವಕೀಲರು ಸಮಯ ಕೇಳಿದ್ದರಿಂದ ಮುಂದೂಡಲಾಯಿತು.**

ಓದಿ ಹೇಳಿ ಸಹಿಪಡೆಯಲಾಗಿದೆ

2ನೇ ಹೆಚ್ಚುವರಿ ಹಿರಿಯ ಮತ್ತು ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ರಾಯಚೂರು.